# 2 ನೇ ಹೆಚ್ಚುವರಿ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಗೋಕಾಕ.

ಸಿ.ಸಿ. ನಂ.864/2012
ಸಿಡಬ್ಲ್ಯೂ. 1 ಪಿಡಬ್ಲ್ಯೂ2

| | | |
|---|---|---|
| ಸಾಕ್ಷಿಯ ಹೆಸರು | - | ಎಲ್.ಆರ್. ಮಸಗುಪ್ಪಿ |
| ವಯಸ್ಸು | - | 42 ವರ್ಷ |
| ಉದ್ಯೋಗ | - | ಪೊಲೀಸ ಇನ್ಸ್‌ಪೆಕ್ಟರ ಲೋಕಾಯುಕ್ತ ಧಾರವಾಡ |
| ವಾಸ | - | ಧಾರವಾಡ |

ದಿನಾಂಕಃ 15-11-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದಃ

ನಾನು 19-11-2011 ರಿಂದ 06-04-2013 ರವರೆಗೆ ಗೋಕಾಕ ಗ್ರಾಮೀಣ ಪೊಲೀಸ ಠಾಣೆ ಯಲ್ಲಿ ಪಿಎಸ್.ಐ ಅಂತಾ ಕಾರ್ಯನಿರ್ವಹಿಸಿದ್ದೇನೆ.

ದಿಃ 1-2-2012 ರಂದು ಸಂಜೆ 6-30 ಕ್ಕೆ ಮಿಸ್ಸಿಂಗ್ ಪ್ರಕರಣದಲ್ಲಿ ತನಿಖೆಯಲ್ಲಿ ಮರಳಿ ಬೆಣಚಿನಮರಡಿ ಗ್ರಾಮಕ್ಕೆ ಬಂದಾಗ ಮಮದಾಪುರ ಗ್ರಾಮದಲ್ಲಿ ಪೊಸ್ಟ ಆಫೀಸ ಹತ್ತಿರ ಯಮನಪ್ಪಾ ಮಲ್ಲಾಡಿ ಮತ್ತು ಬಸಪ್ಪಾ ಪಟ್ಟಾತ ಎಂಬುವರು ಸಾರ್ವಜನಿಕ ರಸ್ತೆಯ ಬದಿಯಲ್ಲಿ ಅಕ್ರಮವಾಗಿ ಸರಾಯಿ ಮಾರಾಟ ಮಾಡುತ್ತಿದ್ದಾರೆಂದು ಮಾಹಿತಿ ಬಂದ ಮೇರೆಗೆ ನಾನು ಕೂಡಲೇ ನನ್ನ ಜೊತೆ ಇರುವ ಸಿಬ್ಬಂದಿ ಚಾಸಾ-5 ರವರಿಗೆ ಇಬ್ಬರು ಪಂಚರಿಗೆ ಕರೆದುಕೊಂಡು ಬರಲು ತಿಳಿಸಿದ ಮೇರೆಗೆ ಸದರಿ ಪಂಚರು ಸಿಬ್ಬಂದಿಯೊಂದಿಗೆ ಮರಳಿ ಬಂದಿದ್ದು ಪಂಚರು ಹಾಗು ಸಿಬ್ಬಂದಿಯವರಿಗೆ ಮಮದಾಪುರ ಗ್ರಾಮಕ್ಕೆ ಮಾಹಿತಿ ಬಂದ ಸ್ಥಳಕ್ಕೆ ರೇಡಗೆ ಹೋಗುತ್ತಿದ್ದು ಸದರಿ ಸಮಯದಲ್ಲಿ ಪಂಚರಾಗಿ ಹಾಜರಾಗಲು ತಿಳಿಸಿ ಸದರಿಯವರ ಹಾಗು ಸಿಬ್ಬಂದಿಯವರಿಗೆ ಸಂಪೂರ್ಣ ಮಾಹಿತಿ ತಿಳಿಸಿ ಸಿಬ್ಬಂದಿ ಹಾಗು ಪಂಚರನ್ನು ನಮ್ಮ ಸರ್ಕಾರಿ ಜೀಪನಲ್ಲಿ ಕರೆದುಕೊಂಡು ಮಾಹಿತಿ ಬಂದ ಸ್ಥಳದಿಂದ ಸ್ವಲ್ಪ ದೂರದಲ್ಲಿ ವಾಹನವನ್ನು ನಿಲ್ಲಿಸಿ ವಾಹನದಿಂದ ಕೆಳಗೆ ಇಳಿದು ಸ್ವಲ್ಪ ಹೊತ್ತು ವಾಚ ಮಾಡಿ ನೋಡಲಾಗಿ ಪೋಸ್ಟ ಆಫೀಸದಿಂದ ಪೂರ್ವದ ಬದಿಗೆ ರಸ್ತೆಯಲ್ಲಿ ಕೆಇಬಿ ಕಂಬದ ಕೆಳಗೆ ಲೈಟ ಬೆಳಕಿನಲ್ಲಿ ಇಬ್ಬರು ವ್ಯಕ್ತಿಗಳು ತಮ್ಮ ಹತ್ತಿರ ಇರುವ ರಟ್ಟಿನ ಬಾಕ್ಸದಿಂದ ಕ್ವಾಟರ ಬಾಟಲಿಗಳನ್ನು ಬಂದಿರುವ ಜನರಿಗೆ ಮಾರಾಟ ಮಾಡುತ್ತಿರುವುದು ಹಾಗು ಅವರಿಂದ ಹಣ ಪಡೆಯುತ್ತಿರುವುದು ಕಂಡುಬಂದು ಕೂಡಲೇ ಪಂಚರಿಗೆ ವಿಷಯ ತಿಳಿಸಿ ಸಿಬ್ಬಂದಿಯೊಂದಿಗೆ ನಾವು ಸುತ್ತುವರೆದು ಸದರಿ ಇಬ್ಬರು ವ್ಯಕ್ತಿಗಳನ್ನು ವಶಕ್ಕೆ ಪಡೆದು ಇನ್ನುಳಿದವರು ಓಡಿಹೋಗಿರುತ್ತಾರೆ. ಸದರಿ ವ್ಯಕ್ತಿಗಳ ಹೆಸರು ಕೇಳಲಾಗಿ ಅದರಲ್ಲಿ ಒಬ್ಬನು ತನ್ನ ಹೆಸರು ಯಮನಪ್ಪಾ ಮಲ್ಲಾಡಿ ಸಾ ಮಮದಾಪುರ ಎಂದು ಹೇಳಿದ್ದು ಅವನ ವಶದ ಒಂದು ರಟ್ಟಿನ ಬಾಕ್ಸನ್ನು ತೆಗೆದು ನೋಡಲಾಗಿ ಅದರಲ್ಲಿ 180 ಎಂಎಲನ 120 ಓಲ್ಡಟವರಿನ ಕಂಪನಿಯ ಮಧ್ಯ ತುಂಬಿದ ಪೌಚಗಳು ದೊರೆತಿದ್ದು ಅದೇ ರೀತಿ ಅವರಚಾಯ್ಸ ಕಂಪನಿಯ 180 ಎಂಎಲನ 200 ಮಧ್ಯ ತುಂಬಿದ ಪ್ಲಾಸ್ಟಿಕ ಬಾಟಲಿಗಳು ದೊರೆತಿದ್ದು ಅದೆ ರೀತಿ ಅವನ ಅಂಗಶೋಧನೆ ಮಾಡಲಾಗಿ ಅವನ ಹತ್ತಿರ ನಗದು ರೂ.6000/- ಹಾಗು 02 ಗಾಜಿನ ಗ್ಲಾಸುಗಳು ದೊರೆತವು. ಜೊತೆಗಿರುವ ಇನ್ನೊಬ್ಬನ ಹೆಸರು ಕೆಳಲು ಬಸಪ್ಪ ಪಟಾತ ಸಾ ಮಮದಾಪುರ ಎಂದು ತಿಳಿಸಿದ್ದು ಅವರ ಬಳಿ ಇರುವ ರಟ್ಟಿನ ಬಾಕ್ಸನ್ನು ತೆರೆದು ನೋಡಲಾಗಿ ಅದರಲ್ಲಿ 180 ಎಂಎಲನ 51 ಮಧ್ಯ ತುಂಬಿದ ಪೌಚಗಳು ಹಾಗು ಒಂದು ಗಾಜಿನ ಗ್ಲಾಸ ದೊರೆತಿರುತ್ತದೆ ಸದರಿಯವನ ಅಂಗ ಶೋಧನೆ ಮಾಡಲಾಗಿ ರೂ.250/- ನಗದು ಹಣ ದೊರೆತಿರುತ್ತದೆ. ಸದರಿ ಇಬ್ಬರಿಗೂ ಈ ಮಧ್ಯ ಮಾರಾಟ ಮಾಡಲು ಅವಶ್ಯಕ ಇರುವ ಲೈಸನ್ಸ ಬಗ್ಗೆ ವಿಚಾರಿಸಲಾಗಿ ಇಲ್ಲ ಎಂದು ತಿಳಿಸಿದ್ದರಿಂದ ಹಾಗು ಸದರಿಯವರ ಬಳಿ ಸಂಗ್ರಹಿಸಿರುವ ಹಣದ

ಮೂಲದ ಬಗ್ಗೆ ವಿಚಾರಿಸಲು ಸದರಿ ಮಧ್ಯವನ್ನು ಮಾರಾಟ ಮಾಡಿ ಬಂದ ಹಣ ಎಂದು ಒಪ್ಪಿಕೊಂಡ ಮೇರೆಗೆ ಕೂಡಲೇ ಸದರಿ ಇಬ್ಬರು ವ್ಯಕ್ತಿಗಳನ್ನು ದಸ್ತಗಿರಿ ಮಾಡಿ ಅವರ ಬಳಿ ದೊರೆತ ಮಧ್ಯದ ಬಾಟಲಿಗಳಲ್ಲಿ ಪ್ರತ್ಯೇಕವಾಗಿ ಓಟಿ ಕಂಪನಿಯ 180 ಎಂಎಲನ 1 ಪೌಚ , ಅವರಚಾಯ್ಸು ಕಂಪನಿಯ 180 ಎಂಎಲನ 1 ಪ್ಲಾಸ್ಟಿಕ್ ಬಾಟಲ ಹಾಗು ಹೈವರ್ಡ್ಸ ಕಂಪನಿಯ 180 ಎಂಎಲನ 1 ಮಧ್ಯದ ಪೌಚನ್ನು ಪ್ರತ್ಯೇಕವಾಗಿ ರಾಸಾಯನಿಕ ಪರೀಕ್ಷೆಗಾಗಿ ತೆಗೆದು ಅದರ ಮೇಲೆ ನಮ್ಮ ಹಾಗು ಪಂಚರ ಸಹಿಯುಳ್ಳ ಚೀಟಿಯನ್ನು ಅಂಟಿಸಿದೆವು. ಪಂಚರ ಸಮಕ್ಷಮದಲ್ಲಿ ಜಪ್ತುಮಾಡಿಕೊಂಡು ಪಂಚರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿ ಇನ್ನೂಳಿದ ಮುದ್ದೆಮಾಲು ಹಾಗು ಆರೋಪಿತರೊಂದಿಗೆ ಸದರಿ ಆರೋಪಿತರು ಅಕ್ರಮವಾಗಿ ತಮ್ಮ ಅಕ್ರಮ ಲಾಭಕ್ಕಾಗಿ ಮಧ್ಯವನ್ನು ಲೈಸನ್ಸ ಇಲ್ಲದೆ ಕಾನೂನು ಉಲ್ಲಂಘನೆ ಮಾಡಿ ಮಾರಾಟ ಮಾಡಿರುವುದು ಸಾಬಿತು ಆದ ಮೇಲೆ ಠಾಣೆಗೆ ತೆರಳಿ ಸದರಿಯವರ ಮೇಲೆ ಕರ್ನಾಟಕ ಅಬಕಾರಿ ಕಾಯ್ದೆ 32,34 ಕೆ.ಇ ಆ್ಯಕ್ಟ ರ ಪ್ರಕಾರ ಸರ್ಕಾರಿ ಪರವಾಗಿ ದೂರನ್ನು ನೀಡಿರುತ್ತೇನೆ. ಅದರೊಂದಿಗೆ ಜಪ್ತು ಮಾಡಿದ ಮುದ್ದೆಮಾಲು ಹಾಗು ಆರೋಪಿತರನ್ನು ಚಾಸಾ-9 ರವರಿಗೆ ಮುಂದಿನ ತನಿಖೆಗಾಗಿ ಒಪ್ಪಿಸಿರುತ್ತೇನೆ.

ದೂರನ್ನು ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2 ಎ ಅಂತಾ ಗುರುತಿಸಲಾಯಿತು. ನಿಪಿ-1 ರ ಮೇಲೆ ಸಾಕ್ಷಿಯ ಸಹಿಯನ್ನು ನಿಪಿ-1 (ಸಿ) ಮತ್ತು 1(ಡಿ) ಎಂದು ಗುರುತಿಸಲಾಯಿತು. ಸ್ಯಾಂಪಲಗಾಗಿ ತೆಗೆದ ಮುದ್ದೆಮಾಲುಗಳನ್ನು ನೋಡಿದರೆ ಗುರುತಿಸುತ್ತೇನೆ. ಅವರಚಾಯ್ಸು ಕಂಪನಿಯ ವಿಸ್ಕಿಯ 1x180 ಎಂಎಲ ಪ್ಲಾಸ್ಟಿಕ ಬಾಟಲಿಯನ್ನು ಎಂ.ಓ-2 ,ಹೈವರ್ಡ್ಸ ಕಂಪನಿಯ ಮತ್ತು ಓಟಿ ಕಂಪನಿಯ 02 ಟೇಟ್ರಾ ಪ್ಯಾಕೇಟಗಳನ್ನು ಎಂ.ಓ-1 ಮತ್ತು 3 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ- ಆರೋಪಿಪರ ವಕೀಲರಿಂದಃ- ಸಮಯ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

2 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ.

# <u>2 ನೇ ಹೆಚ್ಚುವರಿ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಗೋಕಾಕ.</u>

ಸಿ.ಸಿ. ನಂ.864/2012
ಸಿಡಬ್ಲ್ಯೂ. 5 ಪಿಡಬ್ಲ್ಯೂ3

ಸಾಕ್ಷಿಯ ಹೆಸರು - ಎಸ್ ಬಿ ಹೊಳೆಯಾಚೆ

ವಯಸ್ಸು - 43 ವರ್ಷ

ಉದ್ಯೋಗ - ಪೊಲೀಸ ಮುಖ್ಯ ಪೇದೆ ಡಿಸಿಆರಬಿ ಘಟಕ ಬೆಳಗಾವಿ

ವಾಸ - ಬೆಳಗಾಂವಿ

ದಿನಾಂಕಃ 15-11-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದಃ</u>

ನಾನು 2010 ರಿಂದ 2018 ರವರೆಗೆ ಗೋಕಾಕ ಗ್ರಾಮೀಣ ಪೊಲೀಸ ಠಾಣೆ ಯಲ್ಲಿ ಮುಖ್ಯ ಪೇದೆ ಅಂತಾ ಕಾರ್ಯನಿರ್ವಹಿಸಿದ್ದೇನೆ.

ದಿಃ 1-2-2012 ರಂದು ನಾನು ಹಾಗು ಚಾಸಾ-1 ಮತ್ತು ಚಾಸಾ-6 ಮತ್ತು 7 ರವರು ಮನುಷ್ಯ ಖಾನೆ ತಪಾಸನೆ ಕುರಿತು ಕೊಳವಿ ಮತ್ತು ಖನಗಾಂವ ಗ್ರಾಮಗಳಿಗೆ ತಿರುಗಾಡುತ್ತಾ ಬೆಣಚಿನಮರಡಿ ಗ್ರಾಮಕ್ಕೆ ಸಂಜೆ 18-30 ಗಂಟೆಗೆ ಬಂದಾಗ ಮಮದಾಪುರ ಗ್ರಾಮದ ಪೊಸ್ಟ ಆಫೀಸ ಹತ್ತಿರ ಯಮನಪ್ಪಾ ಮಲ್ಲಾಡಿ ಮತ್ತು ಬಸಪ್ಪಾ ಪಟ್ನಾತ ಎಂಬುವರು ಸಾರ್ವಜನಿಕ ರಸ್ತೆಯ ಬದಿಯಲ್ಲಿ ಅಕ್ರಮವಾಗಿ ಸರಾಯಿ ಮಾರಾಟ ಮಾಡುತ್ತಿದ್ದಾರೆಂದು ಮಾಹಿತಿ ಬಂದ ಮೇರೆಗೆ ಚಾಸಾ-1 ರವರು ಸದರಿ ವಿಷಯವನ್ನು ನನಗೆ ಹಾಗು ಚಾಸಾ-6 ಮತ್ತು 7 ರವರಿಗೆ ತಿಳಿಸಿ ಇಬ್ಬರು ಪಂಚರನ್ನು ಹಾಜರು ಪಡಿಸಿಕೊಂಡು ಬೆಣಚಿನಮರಡಿ ಗ್ರಾಮದಿಂದ ನಮ್ಮ ಸರ್ಕಾರಿ ಜೀಪದಲ್ಲಿ ಹೊರಟಿದ್ದು 19-15 ಕ್ಕೆ ಮಮದಾಪುರ ಗ್ರಾಮಕ್ಕೆ ತಲುಪಿ ಅಲ್ಲಿ ನಮ್ಮ ಜೀಪವನ್ನು ನಿಲ್ಲಿಸಿ ಮರೆಯಾಗಿ ನೋಡಲು ಇವರಿಬ್ಬರೂ ಸರಾಯಿ ಮಾರಾಟ ಮಾಡುತ್ತಿರುವುದು ಖಾತ್ರಿಯಾಗಲು ಅವರಿಗೆ ಸುತ್ತುವರೆದು ನಾವು ಹಿಡಿದುಕೊಂಡೆವು. ಆಗ ಮೊದಲನೇ ವ್ಯಕ್ತಿಯ ಕುರಿತು ಚಾಸಾ-1 ರವರು ವಿಚಾರಿಸಿದಾಗ ಸದರಿ ವ್ಯಕ್ತಿಗಳ ಹೆಸರು ಕೇಳಲಾಗಿ ಅದರಲ್ಲಿ ಒಬ್ಬನು ತನ್ನ ಹೆಸರು ಯಮನಪ್ಪಾ ಮಲ್ಲಾಡಿ ಸಾ ಮಮದಾಪುರ ಎಂದು ಹೇಳಿದ್ದು ಅವನ ವಶದ ಒಂದು ರಟ್ಟಿನ ಬಾಕ್ಸನ್ನು ತೆಗೆದು ನೋಡಲಾಗಿ ಅದರಲ್ಲಿ 180 ಎಂಎಲನ 120 ಓಲ್ಡಟವರಿನ ಕಂಪನಿಯ ಮದ್ಯ ತುಂಬಿದ ಪೌಚಗಳು ದೊರೆತಿದ್ದು ಅದೇ ರೀತಿ ಅವರಚಾಯ್ಸು ಕಂಪನಿಯ 180 ಎಂಎಲನ 200 ಮದ್ಯ ತುಂಬಿದ ಪ್ಲಾಸ್ಟಿಕ ಬಾಟಲಿಗಳು ದೊರೆತಿದ್ದು ಅದೆ ರೀತಿ ಅವನ ಅಂಗಶೋಧನೆ ಮಾಡಲಾಗಿ ಅವನ ಹತ್ತಿರ ನಗದು ರೂ.6000/- ಹಾಗು 02 ಗಾಜಿನ ಗ್ಲಾಸುಗಳು ದೊರೆತವು. ಜೊತೆಗಿರುವ ಇನ್ನೊಬ್ಬನ ಹೆಸರು ಕೆಳಲು ಬಸಪ್ಪ ಪಟಾತ ಸಾ ಮಮದಾಪುರ ಎಂದು ತಿಳಿಸಿದ್ದು ಅವರ ಬಳಿ ಇರುವ ರಟ್ಟಿನ ಬಾಕ್ಸನ್ನು ತೆರೆದು ನೋಡಲಾಗಿ ಅದರಲ್ಲಿ 180 ಎಂಎಲನ 51 ಮದ್ಯ ತುಂಬಿದ ಪೌಚಗಳು ಹಾಗು ಒಂದು ಗಾಜಿನ ಗ್ಲಾಸ ದೊರೆತಿರುತ್ತದೆ ಸದರಿಯವನ ಅಂಗ ಶೋಧನೆ ಮಾಡಲಾಗಿ ರೂ.250/- ನಗದು ಹಣ ದೊರೆತಿರುತ್ತದೆ. ಸದರಿ ಇಬ್ಬರಿಗೂ ಈ ಮದ್ಯ ಮಾರಾಟ ಮಾಡಲು ಅವಶ್ಯಕ ಇರುವ ಲೈಸನ್ಸ ಬಗ್ಗೆ ವಿಚಾರಿಸಲಾಗಿ ಇಲ್ಲ ಎಂದು ತಿಳಿಸಿದ್ದರಿಂದ ಹಾಗು ಸದರಿಯವರ ಬಳಿ ಸಂಗ್ರಹಿಸಿರುವ ಹಣದ ಮೂಲದ ಬಗ್ಗೆ ವಿಚಾರಿಸಲು ಸದರಿ ಮದ್ಯವನ್ನು ಮಾರಾಟ ಮಾಡಿ ಬಂದ ಹಣ ಎಂದು ಒಪ್ಪಿಕೊಂಡ ಮೇರೆಗೆ ಕೂಡಲೇ ಸದರಿ ಇಬ್ಬರು ವ್ಯಕ್ತಿಗಳನ್ನು ದಸ್ತಗಿರಿ ಮಾಡಿ ಅವರ ಬಳಿ ದೊರೆತ ಮದ್ಯದ ಬಾಟಲಿಗಳಲ್ಲಿ ಪ್ರತ್ಯೇಕವಾಗಿ ಓಟಿ ಕಂಪನಿಯ 180 ಎಂಎಲನ 1 ಪೌಚ , ಅವರಚಾಯ್ಸು ಕಂಪನಿಯ 180 ಎಂಎಲನ 1 ಪ್ಲಾಸ್ಟಿಕ ಬಾಟಲ ಹಾಗು ಹೈವರ್ಡ್ಸ ಕಂಪನಿಯ 180 ಎಂಎಲನ 1 ಮದ್ಯದ ಪೌಚನ್ನು ಪ್ರತ್ಯೇಕವಾಗಿ ರಾಸಾಯನಿಕ ಪರೀಕ್ಷೆಗಾಗಿ ತೆಗೆದು ಅದರ ಮೇಲೆ ನಮ್ಮ ಹಾಗು

ಪಂಚರ ಸಹಿಯುಳ್ಳ ಚೀಟಿಯನ್ನು ಅಂಟಿಸಿದರು. ಪಂಚರ ಸಮಕ್ಷಮದಲ್ಲಿ ಜಪ್ತುಮಾಡಿಕೊಂಡು ಪಂಚರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿ ಇನ್ನೂಳಿದ ಮುದ್ದೆಮಾಲು ಹಾಗು ಆರೋಪಿತರೊಂದಿಗೆ ಚಾಸಾ-1 ರವರು ಠಾಣೆಗೆ ಬಂದು ಸರ್ಕಾರಿ ಪರವಾಗಿ ದೂರನ್ನು ನೀಡಿರುತ್ತಾರೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೆನೆ. ಈ ದಿನ ನ್ಯಾಯಾಲಯದ ಮುಂದಿರುವ ವ್ಯಕ್ತಿಯೇ 1 ನೇ ಆರೋಪಿಯಾಗಿದ್ದಾನೆ. 02 ನೇ ಆರೋಪಿ ತೀರಿಕೊಂಡಿರುತ್ತಾನೆ. ಮುದ್ದೆಮಾಲುಗಳನ್ನು ಗುರುತಿಸುತ್ತೆನೆ, ಅವುಗಳನ್ನು ಈಗಾಗಲೇ ಎಂ.ಓ-1 ರಿಂದ 3 ಎಂದು ಗುರುತಿಸಲಾಗಿದೆ.

ಪಾಟೀ ಸವಾಲುಃ- ಆರೋಪಿಪರ ವಕೀಲರಿಂದಃ- ಸಮಯ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

2 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ.